# ಪರಿಮಳದ ಹೂವುಗಳ ಬಿಟ್ಟುಹೋದ ಚಂದವಳ್ಳಿ

**ಹಿರಿಯ ನಟಿ ಜಯಂತಿ ನಮ್ಮನ್ನು ಅಗಲಿದ್ದಾರೆ (1945–2021). ದಕ್ಷಿಣ ಭಾರತದ ಬಹುಬೇಡಿಕೆಯ ತಾರೆಯಾಗಿ ಮೆರೆದ ಅಭಿನಯ ಶಾರದೆಯ ಮಾಧುರ್ಯಪೂರ್ಣ ಧ್ವನಿ, ಮಾದಕ ಸೌಂದರ್ಯ ಮತ್ತು ಪ್ರತಿಭೆಯ ಪ್ರಭಾವಲಯ ಬಹುಕಾಲ ಮುಕ್ಕಾಗದೇ ಉಳಿಯುತ್ತದೆ.**

■ ಪದ್ಮನಾಭ ಭಟ್

ಆ ಪುಟ್ಟ ಹುಡುಗಿಗೆ ತೆಲುಗಿನ ಮೇರುನಟ ಎನ್.ಟಿ. ರಾಮರಾವ್ ಎಂದರೆ ಪಂಚಪ್ರಾಣ. ತೆರೆಯ ಮೇಲೆ ಅವರನ್ನು ನೋಡಿದಾಗೆಲ್ಲ ರೋಮಾಂಚನಗೊಳ್ಳುತ್ತಿದ್ದ ಅವಳಿಗೆ ಒಮ್ಮೆಯಾದರೂ ಅವರನ್ನು ಮುಖಾಮುಖಿ ನೋಡಬೇಕು ಎಂಬ ಆಸೆ. ಕೊನೆಗೂ ಆ ಆಸೆ ಈಡೇರುವ ಗಳಿಗೆ ಬಂದೇಬಿಟ್ಟಿತು. ಎನ್.ಟಿ.ಆರ್. ಅವರ ಸಿನಿಮಾವೊಂದು ಚಿತ್ರೀಕರಣ ನಡೆಯುತ್ತಿದ್ದ ಸ್ಟುಡಿಯೊಗೆ ಹೋಗುವ ಅವಕಾಶ ಸಿಕ್ಕಿತು. ತಮ್ಮನ್ನು ಕಾಣಲುಬಂದ ಪುಟ್ಟ ಹುಡುಗಿಯನ್ನು ಚಿತ್ರೀಕರಣದ ಬಿಡುವಿನಲ್ಲಿ ಗಮನಿಸಿದ ಎನ್.ಟಿ.ಆರ್. ಕರೆದು ಅಕ್ಕರೆಯಿಂದ ತೊಡೆಯ ಮೇಲೆ ಕೂರಿಸಿಕೊಂಡರು. ನಂತರ ಮೆಲ್ಲಗೆ ಗಲ್ಲ ಹಿಡಿದೆತ್ತಿ, 'ನನ್ ಜೊತೆ ಹೀರೊಯಿನ್ ಆಗಿ ನಟಿಸ್ತೀಯಾ?' ಎಂದು ಕೇಳಿದರು. ಹುಡುಗಿ ನಾಚಿಕೊಂಡಳಷ್ಟೆ. ಆದರೆ ಆ ಕ್ಷಣದಲ್ಲಿಯೇ ಅವಳ ಕಣ್ಣುಗಳಲ್ಲಿ ಅಚ್ಚಾಗಿಕೂತ ಕನಸೊಂದನ್ನು ಬಹುಶಃ ಎನ್.ಟಿ.ಆರ್. ಕೂಡ ಗಮನಿಸಿರಲಿಕ್ಕಿಲ್ಲ.

ಎಷ್ಟೋ ವರ್ಷಗಳ ನಂತರ ಅದೇ ಹುಡುಗಿ, 'ಜಗದೇಕ ವೀರುನಿ ಕಥಾ', 'ಕುಲ ಗೌರವಂ', 'ಕೊಂಡವೀಟಿ ಸಿಂಹಂ', 'ಜಸ್ಟೀಸ್ ಚೌಧರಿ'ಗಳಂಥ ಹಿಟ್ ಸಿನಿಮಾಗಳಲ್ಲಿ ಎನ್.ಟಿ.ಆರ್. ಜೊತೆಗೆ ತೆರೆಯನ್ನು ಹಂಚಿಕೊಂಡರು. ಆ ಹುಡುಗಿಯ ಹೆಸರು ಜಯಂತಿ!

ಬಳ್ಳಾರಿಯ ಬಿರುಬಿಸಿಲಿನಲ್ಲಿ ಎರಡು ಜಡೆ ಬಿಗಿದುಕೊಂಡು ಶಾಲೆಗೆ ಹೋಗುತ್ತಿದ್ದ ಕಮಲಾಕುಮಾರಿಯೆಂಬ ಚುರುಕು ಹುಡುಗಿಯೊಬ್ಬಳು, ಚಂದನವನದಲ್ಲಿ ಬೆಳದಿಂಗಳು ಹರಿಸಿ, ದಕ್ಷಿಣ ಭಾರತದ ಬಹುಭಾಷೆಯ ತಾರೆಯಾಗುವವರೆಗಿನ ಹಲವು ತಿರುವುಗಳ ದಾರಿಗೆ ಜಯಂತಿ ಎಂದು ಹೆಸರು. ಕಪ್ಪು ಬಿಳುಪು ಚಿತ್ರಗಳಲ್ಲಿ ನೆತ್ತಿಗೆ ಸೆರಗು ಹೊದ್ದುಕೊಂಡು, ಸರ್ವಾಲಂಕಾರಭೂಷಿತೆಯಾದ ದಂತದ ಗೊಂಬೆಯಂಥ ರಾಜಕುಮಾರಿಯಾಗಿ ರೋಮಾಂಚನ ಹುಟ್ಟಿಸಿದಷ್ಟೇ, ಬಾಬ್‌ಕಟ್‌ನಲ್ಲಿ, ದೊಡ್ಡ ಕುಂಕುಮದಲ್ಲಿ ಮುಕ್ತ ನಗುವಿನ ಜಯಂತಮ್ಮನಾಗಿಯೂ ಅಕ್ಕರೆಯನ್ನು ಗಳಿಸಿಕೊಂಡ ನಟಿ ಅವರು.

1945 ಜನವರಿ 6ರಂದು ಅಂದರೆ ಬ್ರಿಟಿಷ್ ಆಡಳಿತದ ಕಾಲದಲ್ಲಿಯೇ ಹುಟ್ಟಿದ ಅವರು ಚಿತ್ರರಂಗ ಪ್ರವೇಶಿಸಿದ್ದು ತೆಲುಗು, ತಮಿಳು ಸಿನಿಮಾಗಳಲ್ಲಿ ಹಿನ್ನೆಲೆ ನೃತ್ಯಗಾರ್ತಿಯಾಗಿ. 1963ರಲ್ಲಿ ವೈ.ಆರ್. ಸ್ವಾಮಿ ಅವರ 'ಜೇನುಗೂಡು' ಸಿನಿಮಾ ಮೂಲಕ ನಾಯಕಿಯಾಗಿ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು. ಅಲ್ಲಿಯವರೆಗೂ ಕಮಲಾಕುಮಾರಿಯಾಗಿದ್ದ ಅವರನ್ನು ಜಯಂತಿಯಾಗಿಸಿದ್ದು, 'ಚಂದವಳ್ಳಿಯ ತೋಟ' ಸಿನಿಮಾ. ಎರಡನೇ ಸಿನಿಮಾದಲ್ಲಿಯೇ ರಾಜ್‌ಕುಮಾರ್ ಅವರಿಗೆ ನಾಯಕಿಯಾಗಿ ನಟಿಸಿದ ಅವರು ಅಲ್ಲಿಂದ ತಿರುಗಿ ನೋಡಿದ್ದೇ ಇಲ್ಲ. ರಾಜ್ ಜೊತೆಗೇ ಸುಮಾರು ನಲವತ್ತು ಸಿನಿಮಾಗಳಲ್ಲಿ ನಟಿಸಿದ್ದಾರೆಂದರೆ ಅವರ ವೈಭವ ಯಾವ ಎತ್ತರದಲ್ಲಿತ್ತೆಂದು ಊಹಿಸಿಕೊಳ್ಳಬಹುದು. ಕನ್ನಡದಲ್ಲಿ ರಾಜ್‌ಕುಮಾರ್, ವಿಷ್ಣುವರ್ಧನ್, ಅನಂತ್‌ನಾಗ್ ಸೇರಿದಂತೆ ಹಲವು ಸ್ಟಾರ್‌ಗಳ ಜೊತೆಗೆ ನಟಿಸಿರುವುದಷ್ಟೇ ಅಲ್ಲ, ದಕ್ಷಿಣ ಭಾರತದ ಬಹುತೇಕ ಎಲ್ಲ ಭಾಷೆಗಳ ಚಿತ್ರಚರಿತ್ರೆಯಲ್ಲಿಯೂ ಜಯಂತಿ ಅವರ ಹೆಜ್ಜೆಗುರುತುಗಳಿವೆ. ತೆಲುಗಿನಲ್ಲಿ ಎನ್.ಟಿ.ಆರ್., ಅಕ್ಕಿನೇನಿ ನಾಗೇಶ್ವರರಾವ್, ಎಸ್.ವಿ. ರಂಗರಾವ್, ಚಿರಂಜೀವಿ, ತಮಿಳಿನಲ್ಲಿ

